# ಬೆಂಗಳೂರು ವಿಶ್ವವಿದ್ಯಾಲಯ

Accredited by NAAC with A⁺⁺
ಜ್ಞಾನಭಾರತಿ ಆವರಣ, ಬೆಂಗಳೂರು-56

ಸಂಖ್ಯೆ: ಎಸಿಎ-1/ಶೈ.ವೇ.ಪಟ್ಟಿ/ಸ್ನಾತಕ/ಪ್ರ.ಅ.ವಿ/2025-26

ದಿನಾಂಕ:16.07.2025

**ಸುತ್ತೋಲೆ**

ವಿಷಯ: 2025-26ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿ ಕೋರ್ಸಿನ ಪ್ರವೇಶಾತಿಯ ಕೊನೆಯ ದಿನಾಂಕವನ್ನು ವಿಸ್ತರಿಸುವ ಕುರಿತು.

ಉಲ್ಲೇಖ:
1. ಬೆಂ.ವಿ.ವಿ. ಶುಲ್ಕ ಅಧಿಸೂಚನೆ ಸಂಖ್ಯೆ: Aca-I/A4/UG-Calendar of Events/ 2025-26 ದಿನಾಂಕ: 16.04.2025
2. ಸುತ್ತೋಲೆ ಸಂಖ್ಯೆ:ಇಡಿ216ಯುಎನ್ಇ2025, ದಿನಾಂಕ:30.06.2025
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:15.07.2025

** * **

ಬೆಂಗಳೂರು ವಿಶ್ವವಿದ್ಯಾಲಯದ 2025-26ನೇ ಸಾಲಿನ ಸ್ನಾತಕ ಪದವಿ ಶೈಕ್ಷಣಿಕ ವೇಳಾಪಟ್ಟಿ ಅಧಿಸೂಚನೆ ಸಂಖ್ಯೆ: Aca-I/A4/UG-Calendar of Events/ 2025-26 ದಿನಾಂಕ: 16.04.2025ರಲ್ಲಿ ಪ್ರವೇಶಾತಿಯ ಕೊನೆಯ ದಿನಾಂಕ: 19.07.2025ಕ್ಕೆ ನಿಗಧಿಗೊಳಿಸಲಾಗಿರುತ್ತದೆ. **ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ216 ಯುಎನ್ಇ2025, ದಿನಾಂಕ: 30.06.2025ರಲ್ಲಿ 2025-26ನೇ ಸಾಲಿನ ಸ್ನಾತಕ ಪದವಿ ಕೋರ್ಸುಗಳಿಗೆ ದಂಡ ಶುಲ್ಕರಹಿತವಾಗಿ ದಿನಾಂಕ: 30.08.2025ರವರೆಗೆ ವಿಸ್ತರಿಸಿರುವುದರಿಂದ ಸ್ನಾತಕ ಪದವಿ ಕೋರ್ಸುಗಳ ಪ್ರಥಮ ಸೆಮಿಸ್ಟರ್ ಪ್ರವೇಶಾತಿಯ ಕೊನೆಯ ದಿನಾಂಕವನ್ನು ದಿನಾಂಕ:30.08.2025ರವರೆಗೆ ವಿಸ್ತರಿಸಲಾಗಿದೆ.** ವಿಸ್ತರಿಸಲಾದ ಅವಧಿಯಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ನಡೆಸಿ, ಪಾಠ ಪ್ರವಚನ ಪೂರ್ಣಗೊಳಿಸಲು ಕ್ರಮವಹಿಸಲು ಸೂಚಿಸಲಾಗಿದೆ.

2024-25ನೇ ಶೈಕ್ಷಣಿಕ ಸಾಲಿನ ಸಮ ಸೆಮಿಸ್ಟರ್ ಪರೀಕ್ಷೆಗಳು ಪೂರ್ಣಗೊಂಡ ನಂತರ ಅರ್ಹ ವಿದ್ಯಾರ್ಥಿಗಳನ್ನು ಮುಂದಿನ ಸೆಮಿಸ್ಟರ್‌ಗೆ (Promotion) ಪ್ರಮೋಷನ್ ಮಾಡಿ, ತದನಂತರ ಯುಯುಸಿಎಂಎಸ್ ಮುಖಾಂತರ ವಿಶ್ವವಿದ್ಯಾಲಯಕ್ಕೆ ಪಟ್ಟಿ ಸಲ್ಲಿಸಿ ದಿನಾಂಕ: 30.08.2025ರೊಳಗೆ 2, 3 ಮತ್ತು 4ನೇ ವರ್ಷದ (ಬೆಸ ಸೆಮಿಸ್ಟರ್) ವಿದ್ಯಾರ್ಥಿಗಳ ಅನುಮೋದನೆ ಪಡೆದುಕೊಳ್ಳುವಂತೆ ಸೂಚಿಸಲಾಗಿದೆ.

ಮುಂದುವರೆದು, 2025-26ನೇ ಶೈಕ್ಷಣಿಕ ಸಾಲಿನಲ್ಲಿ ವರ್ಗಾವಣೆ ಮತ್ತು ಮರುಪ್ರವೇಶ ಪಡೆದುಕೊಳ್ಳುವ ವಿದ್ಯಾರ್ಥಿಗಳು ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರ ಮುಖಾಂತರ ದಿನಾಂಕ: 30.08.2025ರೊಳಗೆ ವಿಶ್ವವಿದ್ಯಾಲಯಕ್ಕೆ ಮನವಿ ಸಲ್ಲಿಸಿ, ವರ್ಗಾವಣೆ ಮತ್ತು ಮರುಪ್ರವೇಶಕ್ಕೆ ಅನುಮತಿ ಹಿಂಬರಹ ಪತ್ರವನ್ನು ಪಡೆದುಕೊಳ್ಳುವಂತೆ ಸೂಚಿಸಲಾಗಿದೆ.

ಆದೇಶಾನುಸಾರ

16/7/25

ಕುಲಸಚಿವರು

ಗೆ,
ಸಂಯೋಜಿತ ಸ್ನಾತಕ ಕಾಲೇಜುಗಳ ಪ್ರಾಂಶುಪಾಲರುಗಳು,

**ಪ್ರತಿಗಳು:**
1. ಕುಲಸಚಿವರು (ಮೌಲ್ಯಮಾಪನ) ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
2. ಡೀನರು, ಕಲಾ/ವಿಜ್ಞಾನ ಹಾಗೂ ವಾಣಿಜ್ಯ ಮತ್ತು ನಿರ್ವಹಣೆ ನಿಖಾಯ, ಬೆಂ.ವಿ.ಬೆಂ.
3. ನಿರ್ದೇಶಕರು, ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ವಿಭಾಗ, ಬೆಂ.ವಿ.ಬೆಂ.
4. ಇ-ಕಛೇರಿ, ಐ.ಟಿ. ಸೆಂಟರ್, ಬೆಂ.ವಿ.ಬೆಂ.- ವೆಬ್‌ಸೈಟ್ ನಲ್ಲಿ ಪ್ರಕಟಿಸುವ ಸಲುವಾಗಿ.
5. ನೋಡಲ್ ಅಧಿಕಾರಿಗಳು, ಯುಯುಸಿಎಂಎಸ್, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
6. ಆಪ್ತ ಕಾರ್ಯದರ್ಶಿಗಳು, ಕುಲಪತಿಗಳು/ಕುಲಸಚಿವರು/ಕುಲಸಚಿವರು(ಮೌ)/ವಿತ್ತಾಧಿಕಾರಿಗಳು, ಬೆಂ.ವಿ.ಬೆಂ.
7. ಕಛೇರಿ ಪ್ರತಿ / ಹೆಚ್ಚುವರಿ ಪ್ರತಿ.